**SC No. 29/2025**
**PW-2**
**CW-2**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ: 57)<br>ನಮೂನೆ ಸಂಖ್ಯೆ: 4 |

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಎಸ್.ಸಿ ನಂ: **29/2025**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರವಿಕಾಂತ ಹೈಬತ್ತಿ | ಪ್ರಾಸಾ: 2 |
| ತಂದೆಯ ಹೆಸರು | : | ಲಕ್ಷ್ಮಣ ಹೈಬತ್ತಿ | ಚಾಸಾ: 2 |
| ವಯಸ್ಸು | : | 62 ವರ್ಷ | ದಿನಾಂಕ 09.06.2026 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ಲೇಥ ಮಶೀನ್ ಕೆಲಸ | |
| ವಾಸಸ್ಥಳ | : | ಶಹಪೂರ, ಬೆಳಗಾವಿ | |

**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನನಗೆ ಚಾಸಾ 1 ಮತ್ತು 3 ಗೊತ್ತು. ಪೋಲಿಸರು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನನ್ನ ಸಮಕ್ಷಮ ಘಟನಾ ಸ್ಥಳಕ್ಕೆ ಬಂದು ಯಾವುದೇ ಪಂಚನಾಮೆಯನ್ನು ಮಾಡಿ ವಸ್ತುಗಳನ್ನು ಅಮಾನತು ಪಡಿಸಿಕೊಂಡಿಲ್ಲ. ಈಗ ನನಗೆ ತೋರಿಸಿದ ನೋಟಿಸಿನಲ್ಲಿ ನನ್ನ ಸಹಿ ಇದೆ. ಆ ನೋಟಿಸನ್ನು ನಿ.ಪಿ.9 ಮತ್ತು ಅದರಲ್ಲಿರುವ ಸಾಕ್ಷಿಯನ್ನು ನಿ.ಪಿ.9(ಎ) ಎಂದು ಗುರುತಿಸಲಾಗಿದೆ. ಈಗ ನನಗೆ ತೋರಿಸಿದ ನಿ.ಪಿ.2 ಪಂಚನಾಮೆಯಲ್ಲಿ ಮತ್ತು ನಿ.ಪಿ.3, 4 ಕಚ್ಚಾ ನಕಾಶೆಗಳಲ್ಲಿ ನನ್ನ ಸಹಿಗಳಿವೆ. ಸಾಕ್ಷಿಯು ಗುರುತಿಸಿದ ಸಹಿಗಳನ್ನು ನಿ.ಪಿ. 2(ಬಿ), 3(ಬಿ) ಮತ್ತು 4(ಬಿ) ಎಂದು ಗುರುತಿಸಲಾಗಿದೆ. ನಿ.ಪಿ.2 ರಿಂದ 4ರಲ್ಲಿ ಏನು

ಬರೆದಿದೆ ಮತ್ತು ಅದಕ್ಕೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸಿದ ನಿ.ಪಿ.5 ರಿಂದ 7 ಫೋಟೊಗಳಲ್ಲಿ ನಾನು ಕಾಣಿಸುತ್ತೇನೆ. ಆ ಫೋಟೊಗಳನ್ನು ಯಾವ ಕಾರಣಕ್ಕಾಗಿ ತೆಗೆದಿದ್ದರು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಅಭಿಯೋಜನೆಯ ಪರ ಕೇಸಿಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿಯುವುದು ಕಂಡುಬರುತ್ತದೆ, ಈ ಕಾರಣದಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ  ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ

2. ದಿನಾಂಕ 24.05.2024 ರಂದು ಮಧ್ಯಾಹ್ನ 01.30 ಗಂಟೆಗೆ ಶಹಪೂರ ಪೋಲಿಸರು ಈ ಪ್ರಕರಣದ ಘಟನೆ ನಡೆದ ಶಹಪೂರದ ಮರಾಠಿ ಶಾಲೆಯ ಮುಂಭಾಗಕ್ಕೆ ಬಂದು ಅಲ್ಲಿ ಪಂಚನಾಮೆ ಮಾಡುವ ಸಂಬಂಧ ಸಹಕರಿಸಬೇಕು ಎಂದು ನನಗೆ ನಿ.ಪಿ.9 ರಂತೆ ಒಂದು ನೋಟಿಸು ಕೊಟ್ಟಿದ್ದರು ಎನ್ನುವುದು ನಿಜವಲ್ಲ. ಆ ಬಳಿಕ ಪೋಲಿಸರು ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ನಿ.ಪಿ.2 ರಂತೆ ಒಂದು ಪಂಚನಾಮೆಯನ್ನು ಮಾಡಿ ಕೃತ್ಯಕ್ಕೆ ಸಂಬಂಧಪಟ್ಟಂತೆ ಒಂದು ಕಬ್ಬಿಣದ ತಲವಾರು, ಕ್ರಿಕೇಟ ಸ್ಟಂಪ ಮತ್ತು ಕಲ್ಲನ್ನು ಅಮಾನತು ಪಡಿಸಿಕೊಂಡಿದ್ದರು ಎನ್ನುವುದು ನಿಜವಲ್ಲ. ಆ ಪಂಚನಾಮೆಯ ಕಾಲಕ್ಕೆ ಪೋಲಿಸರು ನಿ.ಪಿ.3 ಮತ್ತು 4 ರಂತೆ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿ ನಿ.ಪಿ.5 ರಿಂದ 7 ರಂತೆ ಫೋಟೊಗಳನ್ನು ತೆಗೆದಿದ್ದರು ಎನ್ನುವುದು ನಿಜವಲ್ಲ. ಆರೋಪಿತರಿಗೆ ಸಹಾಯ ಮಾಡಲು ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ.

ಪಾಟೀ ಸವಾಲುಃ  ಆರೋಪಿತರ ಪರವಾಗಿಃ  ಶ್ರೀ ಎಸ್ ಎನ್ ಪಿ ವಕೀಲರಿಂದಃ

ಆರೋಪಿ ಪರ ವಕೀಲರು ಇಲ್ಲ ಎಂದು ಹೇಳುತ್ತಾರೆ.

**SC No. 29/2025**
**PW-2**
**CW-2**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.